**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.(NDPS).8/2021**

ಸಾಕ್ಷಿದಾರರ ಹೆಸರು : ಗಿರೀಶ

ತಂದೆಯ ಹೆಸರು : ವೀರಭದ್ರಪ್ಪ

ವಯಸ್ಸು : 43 ವರ್ಷ

ಉದ್ಯೋಗ : ಸಿ.ಪಿ.ಐ. ತರಿಕೆರೆ ಗ್ರಾಮಾಂತರ, ತರಿಕೆರೆ

ವಾಸ ಸ್ಥಳ : ತರಿಕೆರೆ

ಪಿ.ಡಬ್ಲ್ಯೂ 1

ಸಿ.ಡಬ್ಲ್ಯೂ 1

ದಿ: 11-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ದಾವಣಗೆರೆಯ CEN ಪೊಲೀಸ್ ಠಾಣೆ ಯಲ್ಲಿ ನಾನು ನವೆಂಬರ್ 2020 ರಿಂದ ಡಿಸೆಂಬರ್ 2021 ರವರೆಗೆ ಪಿ.ಐ.(ಕ್ರೈಂ.) ಆಗಿ ಕೆಲಸ ಮಾಡಿದ್ದೇನೆ. ಈ ಪ್ರಕರಣದಲ್ಲಿ ದಿಃ 03-04-2021 ರಂದು ನಾನು ಠಾಣೆಯಲ್ಲಿದ್ದಾಗ ದಾವಣಗೆರೆ ನಗರದ ಬಾಡಾ ಕ್ರಾಸ್ ಹತ್ತಿರ ಚಿಂದೋಡಿ ಲೀಲಾ ರಂಗಲೋಕ ಹಿಂಭಾಗದ ರಸ್ತೆಯ ಹತ್ತಿರ ಅಕ್ರಮವಾಗಿ ಗಾಂಜಾ ಇಟ್ಟು ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದಿರುತ್ತದೆ. ಆಗ ಬೆಳಿಗ್ಗೆ 10.00 ಗಂಟೆ ಆಗಿತ್ತು. ಈ ಬಗ್ಗೆ ನಾನು ಠಾಣಾ ದಿನಚರಿಯಲ್ಲಿ ನಮೂದಿಸಿರುತ್ತೇನೆ. ಆ ಠಾಣಾ ದಿನಚರಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-1 ಅಂತ, ನನ್ನ ಸಹಿಯನ್ನು ನಿಪಿ-1(ಎ) ಅಂತ ಗುರುತಿಸುತ್ತೇನೆ. ನಿಪಿ-1 ರಲ್ಲಿ 4 ಪುಟಗಳು ಇರುತ್ತವೆ. ನಂತರ

ಮುಂದಿನ ದಾಳಿಯ ಬಗ್ಗೆ ಎಸ್.ಪಿ.ರವರಿಗೆ ಮಾಹಿತಿಯನ್ನು ತಿಳಿಸಿರುತ್ತೇನೆ. ದಿಃ 03-04-2021 ರಂದು ದಾಳಿ ಬಗ್ಗೆ ಎಸ್.ಪಿ.ರವರಿಗೆ ನೀಡಿದ ಮಾಹಿತಿ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-2 ಅಂತ, ನನ್ನ ಸಹಿಯನ್ನು ನಿಪಿ-2(ಎ) ಅಂತ ಗುರುತಿಸುತ್ತೇನೆ. ನಂತರ ದಾಳಿ ಮಾಡಲು ಪಂಚರಾಗಿ ಬರಲು ವಲಯ – 1 ಅಬಕಾರಿ ನಿರೀಕ್ಷಕರು ಹಾಗೂ ಪತ್ರಾಂಕಿತ ಅಧಿಕಾರಿ ಚಾಸಾ-4 ರವರಿಗೆ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ. ಅಬಕಾರಿ ನೀರಿಕ್ಷಕರಿಗೆ ನೀಡಿದ ಪತ್ರವನ್ನು ನೋಡುತ್ತಿದ್ದು, ಅದನ್ನು ನಿಪಿ-3 ಅಂತ, ನನ್ನ ಸಹಿಯನ್ನು ನಿಪಿ-3(ಎ) ಅಂತ ಗುರುತಿಸುತ್ತೇನೆ. ಪತ್ರಾಂಕಿತ ಅಧಿಕಾರಿಗೆ ನೀಡಿದ ಪತ್ರವನ್ನು ನೋಡುತ್ತಿದ್ದು, ಅದನ್ನು ನಿಪಿ-4 ಅಂತ, ನನ್ನ ಸಹಿಯನ್ನು ನಿಪಿ-4(ಎ) ಅಂತ ಗುರುತಿಸುತ್ತೇನೆ. ನಂತರ ಠಾಣೆಗೆ ಚಾಸಾ-2 ಮತ್ತು 3 ರವರು ಪಂಚರಾಗಿ ಮತ್ತು ಚಾಸಾ-4 ರವರು ಬಂದಿದ್ದರು. ದಾಳಿ ಬಗ್ಗೆ ಅವರಿಗೆ ಮಾಹಿತಿಯನ್ನು ತಿಳಿಸಲಾಗಿ ಪತ್ರಾಂಕಿತ ಅಧಿಕಾರಿಯ ಬಗ್ಗೆ ತಿಳಿಸಿ ಅವರು ಪಂಚರಾಗಿ ಒಪ್ಪಿದ ಮೇರೆಗೆ ಹೆಚ್.ಸಿ. ನಾಗರಾಜರವರ ಮೂಲಕ ನೋಟಿಸ್ಸು ಜಾರಿ ಮಾಡಲಾಯಿತು. ಎರಡು ನೋಟಿಸ್ಸಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ-5 ಮತ್ತು 6 ಅಂತ, ನನ್ನ ಸಹಿಗಳನ್ನು ನಿಪಿ-5(ಎ) ಮತ್ತು 6(ಎ) ಅಂತ ಗುರುತಿಸುತ್ತೇನೆ.

ನಂತರ ಬೆಳಿಗ್ಗೆ 11.00 ಗಂಟೆಗೆ ಠಾಣೆಯಿಂದ ನಾನು ಎರಡು ಪಂಚರು ಹಾಗೂ ಸಿಬ್ಬಂದಿಗಳಾದ ಚಾಸಾ-9, 10 ರವರು ನಮ್ಮ ಜೀಪಿಸಿನಲ್ಲಿ, ಚಾಸಾ-4 ಅವರ ಜೀಪಿನಲ್ಲಿ, ಚಾಸಾ-5 ರಿಂದ 8 ರವರೊಂದಿಗೆ ಹೊರಟೆದ್ದೆವು. ಹದಡಿಯ ರಸ್ತೆಯ ಮೂಲಕ ಹೋಗಿ ಬೆಳಿಗ್ಗೆ 11.30 ಗಂಟೆಗೆ ಬಾಡಾ ಕ್ರಾಸ್ ಹತ್ತಿರ ಮಾಹಿತಿ ಬಂದ ಸ್ಥಳದ ಸ್ವಲ್ಪ ದೂರದಲ್ಲಿ ನಿಲ್ಲಿಸಿ ಅಲ್ಲಿ ಪಂಚರ ಸಮಕ್ಷಮ ಒಬ್ಬರಿಗೊಬ್ಬರು ಅಂಗ ಶೋಧನೆ ಮಾಡಿಕೊಂಡಿದ್ದು, ಗಾಂಜಾಗೆ ಸಂಬಂಧಿಸಿದ ವಸ್ತುಗಳು ಇಲ್ಲ ಅಂತ ಖಚಿತಪಡಿಸಿಕೊಂಡೆವು. ಎನ್.ಹೆಚ್. -48 ರಸ್ತೆಯ ಸರ್ವೀಸ್ ರಸ್ತೆಯ ಪಕ್ಕದಲ್ಲಿರುವ ಮಣ್ಣಿನ ರಸ್ತೆಯಲ್ಲಿ ಇಬ್ಬರು ವ್ಯಕ್ತಿಗಳು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಹಿಡಿದುಕೊಂಡು ನಿಂತುಕೊಂಡಿದ್ದರು. ಅವರು ಗಾಂಜಾವನ್ನು ಮಾರಾಟ

ಮಾಡಲು ನಿಂತಿದ್ದರು. ನಂತರ ಸಿಬ್ಬಂದಿಗಳ ಸಹಾಯದಿಂದ ಅವರನ್ನು ಹಿಡಿಯಲು ಪ್ರಯತ್ನಿಸಿದಾಗ ಅವರು ಚೀಲವನ್ನು ಬಿಟ್ಟು ಓಡಿ ಹೋಗಲು ಪ್ರಯತ್ನಿಸಿದರು. ಅವರನ್ನು ಹಿಡಿದು ವಿಚಾರಿಸಿದೆವು. ಅದರಲ್ಲಿ ಚೀಲವನ್ನು ಹಿಡಿದುಕೊಂಡ ವ್ಯಕ್ತಿಯ ಹೆಸರು ಅಂತರಾಮ್ ತೀರ್ಕಿ ( 1 ನೇ ಆರೋಪಿ), 21 ವರ್ಷ, ಮೂಲತಃ, ಛತ್ತೀಸಗಡದವನು ಗೋವಾದಲ್ಲಿ ವಾಸವಿರುವುದಾಗಿ ಹೇಳಿದನು. ಇನ್ನೊಬ್ಬ ವ್ಯಕ್ತಿಯ ಹೆಸರು ಮಧುರಾಜ @ ಮಧುನಾಯ್ಕು, ಮೂಲತಃ ಕೂಡ್ಲಿಗಿ ತಾಲ್ಲೂಕು, ಹಾಲಿ ವಾಸಃ ಗೋವಾ ಅಂತ ತಿಳಿಸಿದರು. ಪ್ಲಾಸ್ಟಿಕ್ ಚೀಲದ ಬಗ್ಗೆ ವಿಚಾರಿಸಿದಾಗ ಅವರು ಅದರಲ್ಲಿ ಗಾಂಜಾ ಇದ್ದು ಅದನ್ನು ಅಕ್ರಮವಾಗಿ ಮಾರಾಟ ಮಾಡಲು ಗೋವಾದಿಂದ ಅನಿಲ ಜಾಕೋಬ್ (3 ನೇ ಆರೋಪಿ) ರವರಿಂದ ಪಡೆದುಕೊಂಡು ಬಂದು ಇಲ್ಲಿ ಸದರಿ ಗಾಂಜಾವನ್ನು ಮಾಟಾಟ ಮಾಡಿ ಬಂದ ಹಣವನ್ನು 3 ಜನ ಹಂಚಿಕೊಳ್ಳುವುದಾಗಿ ತಿಳಿಸಿದರು.

2. ನಂತರ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ ಬ್ರೌನ್ ಟೇಪ್ ನಿಂದ ಸುತ್ತಿದ 3 ಪ್ಯಾಕ್ ಗಳಿದ್ದು ಹಾಗೂ ಬಿಳಿ ಬಣ್ಣದ ಕವರ್ ಇದ್ದು ಅದರಲ್ಲಿ ಗಾಂಜಾ ಇರುತ್ತದೆ. ಆ 3 ಪ್ಯಾಕ್ ಗಳನ್ನು ಪಂಚರ ಸಮಕ್ಷಮ ತೆಗೆಸಿ ನೋಡಲಾಗಿ ಅದರಲ್ಲಿ ಹೂವು ಮೊಗ್ಗುಗಳಿಂದ ಕೂಡಿದ ಗಾಂಜಾ ಕಂಡು ಬಂದಿರುತ್ತದೆ. ನಂತರ ಸದರಿವುಗಳನ್ನು ಚಾಸಾ-7 ರವರ ಮೂಲಕ ಎಲೆಕ್ಟ್ರಾನಿಕ್ ತೂಕದ ಯಂತ್ರದಿಂದ ತೂಕ ಮಾಡಿ ನೋಡಲಾಗಿ 2 ಕೆ.ಜಿ. 110 ಗ್ರಾಂ., ಇನ್ನೊಂದರಲ್ಲಿ 2 ಕೆ.ಜಿ. 215 ಗ್ರಾಂ., ಇನ್ನೊಂದರಲ್ಲಿ 2 ಕೆ.ಜಿ. 185 ಗ್ರಾಂ. ಹಾಗೂ 2 ಕೆ.ಜಿ. 90 ಗ್ರಾಂ. ಗಾಂಜಾ ಇತ್ತು. ಇವುಗಳಿಗೆ ಕ್ರಮ ಸಂಖ್ಯೆ 1 ರಿಂದ 4 ಅಂತ ಗುರುತು ನೀಡಲಾಯಿತು. ಒಟ್ಟು ಅದರ ತೂಕ 8 ಕೆ. ಜಿ. 600 ಗ್ರಾಂ. ಗಾಂಜಾ ಇತ್ತು.

3. ನಂತರ ಎರಡು ಆರೋಪಿತರ ಅಂಗ ಶೋಧನೆ ಮಾಡುವ ಬಗ್ಗೆ ಪತ್ರಾಂಕಿತ ಅಧಿಕಾರಿಗಳ ಮುಖಾಂತರ ಮತ್ತು ನ್ಯಾಯಾಧೀಶರ ಮುಖಾಂತರ ಕೇಳಲಾಗಿ, ಅದಕ್ಕೆ ಅವರು ಪತ್ರಾಂಕಿತ ಅಧಿಕಾರಿಗಳ ಮುಖಾಂತರ ಅಂಗ ಶೋಧನೆ ಮಾಡಲು ಒಪ್ಪಿ ಲಿಖಿತ ಪತ್ರ ಕೊಟ್ಟರು. ಆ

ಪೊಲೀಸ್ ನೋಟಿಸ್ಸಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ-7 ಮತ್ತು 8 ಅಂತ ಗುರುತಿಸುತ್ತೇನೆ. ಆರೋಪಿತರ ಸಮ್ಮತಿ ಪತ್ರಗಳನ್ನು ನಿಪಿ-9 ಮತ್ತು 10 ಅಂತ, ನನ್ನ ಸಹಿಯನ್ನು ನಿಪಿ-9(ಎ) ಮತ್ತು 10(ಎ) ಗುರುತಿಸುತ್ತೇನೆ. ಅವುಗಳಲ್ಲಿ ಆರೋಪಿತರ ಸಹಿಗಳನ್ನು ಗುರುತಿಸುತ್ತೇನೆ. ಆರೋಪಿತರ ಸಹಿಗಳನ್ನು ನಿಪಿ-9(ಬಿ) ಮತ್ತು 10(ಬಿ) ಅಂತ ಗುರುತಿಸುತ್ತೇನೆ. ನಾನು ಪತ್ರಾಂಕಿತ ಅಧಿಕಾರಿಯವರಿಗೆ ಆರೋಪಿತರ ಅಂಗ ಶೋಧನೆ ಮಾಡುವ ಬಗ್ಗೆ ನೀಡಿದ ಕೋರಿಕೆ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-11 ಅಂತ, ನನ್ನ ಸಹಿಯನ್ನು ನಿಪಿ-11(ಎ) ಅಂತ ಗುರುತಿಸುತ್ತೇನೆ, ಪತ್ರಾಂಕಿತ ಅಧಿಕಾರಿಗಳ ಸಮಕ್ಷಮ ಎರಡು ಆರೋಪಿತರ ಅಂಗ ಶೋಧನೆ ನಡೆಸಲಾಯಿತು. ಆರೋಪಿ ಮಧುನಾಯ್ಕರವರ ಜೇಬಿನಲ್ಲಿ 100 ಮುಖಬೆಲೆಯ 9 ನೋಟುಗಳು ಇದ್ದವು ಹಾಗೂ 25 ಪಾಲಿಥಿನ್ ಕವರ್ ಇದ್ದವು. ಇನ್ನೊಬ್ಬ ಆರೋಪಿಯ ಜೇಬಿನಲ್ಲಿ ಒಂದು MI company ಯ ಕಪ್ಪು ಬಣ್ಣದ ಮೊಬೈಲ್ ಫೋನ್ ಅದರಲ್ಲಿ ಎರಡು ಸಿಮ್ ಇದ್ದು ಜಿಯೋ ಮತ್ತು ಏರಟೆಲ್ ಇರುತ್ತವೆ. ನಂತರ ಪಂಚರ ಸಮಕ್ಷಮ ಒಟ್ಟು ಗಾಂಜಾ ಇರುವ 4 ಪ್ಯಾಕೆಟ್ ಗಳನ್ನು ಮುಂದಿನ ಕ್ರಮಕ್ಕಾಗಿ ಬಿಳಿ ಬಟ್ಟೆಯಿಂದ ಪ್ರತ್ಯೇಕವಾಗಿ ಸುತ್ತಿ CEN ಅಂತ ಸೀಲ್ ಮಾಡಲಾಯಿತು. ಒಟ್ಟು 900 ರೂಪಾಯಿ ನಗದು ಹಣ, ಮೊಬೈಲ್ ಫೋನ್ ಮತ್ತು ಪ್ಲಾಸ್ಟಿಕ್ ಚೀಲಗಳನ್ನು ಬಿಳಿ ಬಟ್ಟೆಯಿಂದ ಸುತ್ತಲಾಯಿತು. ಇವುಗಳಿಗೆ ಆರೋಪಿತರು, ಪಂಚರು ಸಹಿ ಮಾಡಿದರು. ಸಹಿ ಮಾಡಿರುವ ಚೀಟಿಯನ್ನು ಅವುಗಳಿಗೆ ಅಂಟಿಸಲಾಯಿತು. ಈ ಪಂಚನಾಮೆಯನ್ನು ಬೆಳಿಗ್ಗೆ 11.40 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಮಾಡಲಾಯಿತು. ನಂತರ ಅಮಾನತ್ತುಪಡಿಸಿಕೊಂಡ ವಸ್ತುಗಳು ಮತ್ತು ಆರೋಪಿತರೊಂದಿಗೆ CEN ಪೊಲೀಸ್ ಠಾಣೆ ಗೆ ಬಂದೆವು. ನಂತರ ಮುಂದಿನ ಕ್ರಮಕ್ಕಾಗಿ ವರದಿಯೊಂದಿಗೆ ಚಾಸಾ-13 ರವರಿಗೆ ನೀಡಿರುತ್ತೇನೆ. ಆ ಮಹಜರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-12 ಅಂತ, ನನ್ನ ಸಹಿಯನ್ನು ನಿಪಿ-12(ಎ) ಅಂತ ಗುರುತಿಸುತ್ತೇನೆ. ಆ ಸಮಯದಲ್ಲಿ ನಾನು ಈಗ ನೋಡಿದ 9 ಫೋಟೋಗಳನ್ನು ತೆಗೆಸಿದ್ದೇನೆ. 9 ಫೋಟೋಗಳನ್ನು ಕ್ರಮವಾಗಿ ನಿಪಿ-13 ರಿಂದ 21 ಅಂತ ಗುರುತಿಸುತ್ತೇನೆ. ಆ ಫೋಟೋಗಳಲ್ಲಿ 1 ಮತ್ತು 2 ನೇ

ಆರೋಪಿತರು ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ, ಬ್ರೌನ್ ಟೇಪ್ ನಿಂದ ಸುತ್ತಿದ ಬ್ಯಾಗ್ ಗಳು, ತೂಕ ಮಾಡಿದ ಯಂತ್ರ ಮತ್ತು ಜಪ್ತು ಮಾಡಿಕೊಂಡ ವಸ್ತುಗಳು ಕಂಡು ಬರುತ್ತವೆ. ಆ ದಿನ ನಾವು ದಸ್ತಗಿರಿ ಮಾಡಿದ 2 ನೇ ಆರೋಪಿ ಮಧುರಾಜ @ ಮಧುನಾಯ್ಕರವರನ್ನು ಈಗ ನಾನು ಗೋವಾ ಜೆ.ಸಿ. ಯಿಂದ ವಿಸಿಯಲ್ಲಿ ನೋಡುತ್ತಿದ್ದ ಅವರನ್ನು ಗುರುತಿಸುತ್ತೇನೆ. ವರದಿಯೊಂದಿಗೆ ಠಾಣೆಯಲ್ಲಿ ಅಮಾನತ್ತುಪಡಿಸಿಕೊಂಡರು ವಸ್ತುಗಳು ಮತ್ತು ಮಹಜರ ಠಾಣಾಧಿಕಾರಿಗಳಿಗೆ ನೀಡಿ ಇದರ ಬಗ್ಗೆ ದೂರನ್ನು ನೀಡಿರುತ್ತೇನೆ. ಆ ದೂರನ್ನು ಈಗ ನೋಡುತ್ತಿದ್ದು, ದೂರನ್ನು ನಿಪಿ-22 ಅಂತ, ನನ್ನ ಸಹಿಯನ್ನು ನಿಪಿ-22(ಎ) ಅಂತ ಗುರುತಿಸುತ್ತೇನೆ. ಗಾಂಜಾದ ಸ್ಯಾಂಪಲ್ ಗಳು, 100 ರೂ ಮುಖಬೆಲೆಯ 9 ನೋಟುಗಳು, ಸಣ್ಣ ಪ್ಲಾಸ್ಟಿಕ್ ಕವರ್ ಗಳು, ಒಂದು ಬಿಳಿ ಪ್ಲಾಸ್ಟಿಕ್ ಚೀಲ, ಒಂದು MI ಕಂಪನಿಯ ಮೊಬೈಲ್ ನೇದರಲ್ಲಿರುವಂತಹ ಜಿಯೋ ಹಾಗೂ ಏರಟೆಲ್ ಸಿಮ್ ಗಳ ಸಮೇತ ಈ ಪ್ರಕರಣದ ವಿಭಜಿತ ದೋಷಾರೋಪಣ ಪಟ್ಟಿ Spl.C.10/2022 ನೇದರಲ್ಲಿ ಈಗಾಗಲೇ ಮು.ಮಾ.1 ರಿಂದ 8 ಅಂತ ಗುರುತಿಸಲಾಗಿದೆ. ಸಾಕ್ಷಿ ಅವುಗಳನ್ನು ನೋಡಿ ಗುರುತಿಸುತ್ತಾರೆ. ಮಹಜರ ಮಾಡಿದ ಸ್ಥಳದಲ್ಲಿ ನಾನು ಈಗ ನೋಡಿದ ಕಚ್ಚಾ ನಕಾಶೆಯನ್ನು ತಯಾರಿಸಲಾಯಿತು. ಅದನ್ನು ನಿಪಿ-23 ಅಂತ, ನನ್ನ ಸಹಿಯನ್ನು ನಿಪಿ-23(ಎ) ಅಂತ ಗುರುತಿಸುತ್ತೇನೆ. ನಾನು ಪೊಲೀಸ್ ಅಧೀಕ್ಷಕರಿಗೆ ಕೋರಿಕೆಯ ಪತ್ರ ನೀಡಿದ್ದು, ಈ ಬಗ್ಗೆ ದಾಳಿ ಮಾಡಲು ಅನುಮತಿ ನೀಡಿ ಜ್ಞಾಪನ ನೀಡಿರುತ್ತಾರೆ. ಆ ಜ್ಞಾಪನವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-24 ಅಂತ, ನನ್ನ ಸಹಿಯನ್ನು ನಿಪಿ-24(ಎ) ಅಂತ ಗುರುತಿಸುತ್ತೇನೆ. ನಾವು ತೆಗೆದಿರುವ ಪೋಟೋಗಳನ್ನು ಡಿವಿಡಿಗೆ ಹಾಕಿಸಲಾಯಿತು. ಚಾಸಾ-9 ರವರು ದಾಳಿ ಸಮಯದಲ್ಲಿ ತೆಗೆದ ಪೋಟೋಗಳ ಬಗ್ಗೆ 65B ಪ್ರಮಾಣ ಪತ್ರವನ್ನು ನೀಡಿದ್ದು, ಅದನ್ನು ನಾನು ಪಡೆದುಕೊಂಡಿದ್ದೇನೆ. 65B ಪ್ರಮಾಣ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-25 ಅಂತ, ನನ್ನ ಸಹಿಯನ್ನು ನಿಪಿ-25(ಎ) ಅಂತ ಗುರುತಿಸುತ್ತೇನೆ. ಹೆಚ್.ಸಿ., ನಾಗರಾಜರವರು ಪಂಚನಾಮೆಯ ಸಮಯದಲ್ಲಿ ತೆಗೆದ ಪೋಟೋಗಳ ಬಗ್ಗೆ 65B ಪ್ರಮಾಣ ಪತ್ರವನ್ನು ನೀಡಿದ್ದು, ಅದನ್ನು ನಾನು ಪಡೆದುಕೊಂಡಿದ್ದೇನೆ. 65B ಪ್ರಮಾಣ

ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-26 ಅಂತ, ನನ್ನ ಸಹಿಯನ್ನು ನಿಪಿ-26(ಎ) ಅಂತ ಗುರುತಿಸುತ್ತೇನೆ. ದಾಳಿ ಮಾಡಿರುವ ಬಗ್ಗೆ ಎಸ್.ಪಿ. ರವರಿಗೆ ನೀಡಿದ ವಿವರವಾದ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-27 ಅಂತ, ನನ್ನ ಸಹಿಯನ್ನು ನಿಪಿ-27(ಎ) ಅಂತ ಗುರುತಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಎಸ್.ಹೆಚ್.ಎಸ್.(ಎಲ್.ಎ.ಡಿ.ಸಿ.), ವಕೀಲರಿಂದ ಆರೋಪಿತರ ಪರವಾಗಿ**:

4. ದಾಳಿಗೆ ಹೋಗುವ ಪೂರ್ವದಲ್ಲಿ ಸ್ಟೇಷನ್ ಹೌಸ್ ಡೈರಿಯಲ್ಲಿ ನಮೂದು ಮಾಡಿದ್ದೇನೆ. ಪೊಲೀಸ್ ಠಾಣೆಯನ್ನು ಬಿಡುವ ಪೂರ್ವದಲ್ಲಿ ದಾಳಿಗಾಗಿ ಭಾಗವಹಿಸುವ ತಂಡದ ಎಲ್ಲರ ಹೆಸರನ್ನು ನಮೂದು ಮಾಡಿಲ್ಲ ಮಾಹಿತಿಯನ್ನು ಮತ್ತು ದಾಳಿಗೆ ಹೋಗುತ್ತಿರುವ ಬಗ್ಗೆ ಮಾತ್ರ ಸ್ಟೇಷನ್ ಹೌಸ್ ಡೈರಿಯಲ್ಲಿ ನಮೂದು ಮಾಡಿದ್ದೇನೆ. ಯಾರು ಯಾರು ಯಾವ ಯಾವ ವಾಹನದಲ್ಲಿ ಹೋಗುತ್ತಿರುವ ಬಗ್ಗೆ ಹಾಗೂ ವಾಹನದ ಸಂಖ್ಯೆಗಳನ್ನು ಸ್ಟೇಷನ್ ಹೌಸ್ ಡೈರಿಯಲ್ಲಿ ನಮೂದು ಮಾಡಿಲ್ಲ. ಬಂದ ಮಾಹಿತಿಯನ್ನು ಮೇಲಾಧಿಕಾರಿಗಳಿಗೆ ತಿಳಿಸಿದ ಸಮಯವನ್ನು ಆ ಸ್ಟೇಷನ್ ಹೌಸ್ ಡೈರಿಯಲ್ಲಿ ನಮೂದು ಮಾಡಿದ್ದೆ.

ಪಂಚರಾಗಿ ಅಬಕಾರಿ ಇಲಾಖೆಯವರನ್ನು ಬರಲು ನಾವು ಪತ್ರವನ್ನು ಬರೆದಾಗ ಬೆಳಿಗ್ಗೆ 10.15 ಗಂಟೆ ಆಗಿತ್ತು. ಆ ಪತ್ರವನ್ನು ನಮ್ಮ ಸಿಬ್ಬಂದಿಯಾದ ಕೊಟ್ರೇಶರವರ ಮುಖಾಂತರ ಕಳುಹಿಸಿಕೊಟ್ಟಿದ್ದೇನೆ. ಕೊಟ್ರೇಶರವರು ಪೊಲೀಸ್ ಠಾಣೆಯನ್ನು 2-3 ನಿಮಿಷದಲ್ಲಿ ಬಿಟ್ಟಿರುತ್ತಾರೆ. ಅಬಕಾರಿ ಕಛೇರಿಯವರು CEN ಪೊಲೀಸ್ ಠಾಣೆ 300 ಮೀ ಅಂತರದಲ್ಲಿರುತ್ತದೆ. ಅಬಕಾರಿ ಕಛೇರಿಯು ದೇವರಾಜ ಅರಸ್ ಲೇಔಟ್ ನಲ್ಲಿರುತ್ತದೆ ಅಂದರೆ ಸರಿಯಲ್ಲ. ನಾನು ಹೇಳುವ ಅಬಕಾರಿ ಕಛೇರಿ ಅಂದರೆ ಅಬಕಾರಿ ನೀರಿಕ್ಷಕರು, ವಲಯ -1, ವಿದ್ಯಾನಗರ, ದಾವಣಗೆರೆ ಇರುತ್ತದೆ. ಅದರ ವಿಳಾಸ ಎಷ್ಟನೇ ಕ್ರಾಸ್ ಮತ್ತು ಎಷ್ಟನೇ ಮೇನ್ ಇರುತ್ತದೆ ಅಂತ ನನಗೆ ನೆನಪಿಲ್ಲ. 15 ನಿಮಿಷದ ನಂತರ ಅಬಕಾರಿ ಕಛೇರಿಯ ಪಂಚರು ನಮ್ಮ ಠಾಣೆಗೆ ಬಂದರು. ಈಗ ನನಗೆ ತೋರಿಸಿದ ನಿಪಿ-2, ನಿಪಿ-3 ಮತ್ತು ನಿಪಿ-24 ರಲ್ಲಿ ಸಮಯ

ನಮೂದು ಇಲ್ಲ ಅಂದರೆ ನಿಜ. ನಮ್ಮ ಠಾಣೆಯಿಂದ ಎನ್.ಹೆಚ್. 48 ರಸ್ತೆಯು 300 ಅಡಿ ಅಂತರದಲ್ಲಿರುತ್ತದೆ. ನಮ್ಮ ಠಾಣೆಯಿಂದ ಕೃತ್ಯ ನಡೆದ ಸ್ಥಳ 1 ವರೆಯಿಂದ 2 ಕಿ.ಮೀ. ಅಂತದರಲ್ಲಿದೆ.

5. ಚಾಸಾ-3 ಮತ್ತು 4 ರವರು ನಮ್ಮ ಠಾಣೆಗೆ ಬಂದಾಗ ನಮ್ಮ ಸಿಬ್ಬಂದಿ ಇದ್ದರು. ಸ್ವಲ್ಪ ಹೊತ್ತಿನ ನಂತರ ಚಾಸಾ-4 ರವರು ಬಂದರು. ಚಾಸಾ-3 ಮತ್ತು 4 ರವರು ಠಾಣೆಗೆ ಬಂದಾಗ ನಾನೇ ಅವರಿಗೆ ಬಂದ ಮಾಹಿತಿಯನ್ನು ತಿಳಿಸಿರುತ್ತೇನೆ. ಚಾಸಾ-2 ಮತ್ತು 3 ತಮ್ಮ ಮೇಲಾಧಿಕಾರಿಗಳಿಂದ ಪಡೆದ ನೇಮಕಾತಿ ಪತ್ರವನ್ನು ಕೊಟ್ಟಿರುತ್ತಾರೆ. ಅದರಲ್ಲಿ ಸಹ ಸಮಯ ನಮೂದಾಗಿರಲಿಲ್ಲ. ಅವರು ಬಂದು ಮಾಹಿತಿ ಪಡೆದಾಗ ಬೆಳಿಗ್ಗೆ 10.50 ಗಂಟೆ ಆಗಿತ್ತು. ಪಂಚರು ಬಂದ ನಂತರ ನೋಟಿಸ್ಸನ್ನು format ನಲ್ಲಿ ನೀಡಲಾಯಿತು. ನೋಟಿಸ್ಸು ಜಾರಿ ಮಾಡಿದ ಸಮಯ ಬರೆದಿಲ್ಲ. ನೋಟಿಸ್ಸು ಯಾವಾಗ ಜಾರಿ ಆಗಿರುವ ಬಗ್ಗೆ ಸಮಯ ನಮೂದಿಸಲು ತೊಂದರೆ ಇರಲಿಲ್ಲ ಅಂದರೆ ಅವಶ್ಯಕತೆ ಇರಲಿಲ್ಲ.

6. ಎನ್.ಹೆಚ್.-48 ಹದಡಿ ರಸ್ತೆಯ ಸರ್ವೀಸ್ ರಸ್ತೆಯು ಜನ ಸಂಖ್ಯೆ ಇದೆ. ಸಾಕ್ಷಿದಾರರು ಹೇಳುತ್ತಾರೆ normal traffic ಇರುತ್ತದೆ. ಹದಡಿ ರಸ್ತೆಯ under bridge ನಲ್ಲಿ 4 ರಸ್ತೆಯ ಇಂಟರ್ ಜಂಕ್ಷನ್ ಇರುತ್ತದೆ ಅಂದರೆ ನಿಜ. ಆದ್ದರಿಂದ ಅಲ್ಲಿ ಯಾವಾಗಲೂ ತುಂಬಾ ವಾಹನಗಳ ಸಂಚಾರ ಇರುತ್ತದೆ ಅಂದರೆ ಸರಿಯಲ್ಲ. ಅಲ್ಲಿ ಸಾಕಷ್ಟು ವಾಹನಗಳ ಸಂಚಾರ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಠಾಣೆಯಿಂದ ಕೃತ್ಯ ನಡೆದ ಸ್ಥಳಕಕ್ಕೆ ಹೋಗುವ ಮಧ್ಯ ಮಾರ್ಗದಲ್ಲಿ ಯಾರಿಗೂ ತಪಾಸಣೆ ಮಾಡಿಲ್ಲ. ಮೊದಲನೇ ಸಲ ಆರೋಪಿತರನ್ನು ನೋಡಿದಾಗ ಅವರು 300 ಅಡಿ ಅಂತರದಲ್ಲಿದ್ದರು. ನಾವು 50 ಅಡಿ ಅಂತರದಲ್ಲಿರುವಾಗ ಆರೋಪಿತರು ಓಡಿ ಹೋಗಲು ಪ್ರಾರಂಭಿಸಿದರು. ಈ ರೀತಿ ಅಂತರ ಇದ್ದ ಬಗ್ಗೆ ಮಹಜರನಲ್ಲಿ ಮತ್ತು ದೂರಿನಲ್ಲಿ ನಮೂದು ಮಾಡಿಲ್ಲ. ಯಾವ ರೀತಿ ಆರೋಪಿತರನ್ನು ಹಿಡಿದ ಬಗ್ಗೆ ನೆನಪಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಪೊಲೀಸರ ಸಹಾಯದಿಂದ ಆರೋಪಿತರನ್ನು ಹಿಡಿದಿರುತ್ತೇವೆ. ಯಾರು ಯಾವ ಆರೋಪಿಯನ್ನು ಹಿಡಿದರು ಅಂತ

ನೆನಪಿಲ್ಲ. ಅದರ ಬಗ್ಗೆ ದೂರಿನಲ್ಲಿ ನಮೂದು ಮಾಡಿಲ್ಲ. ಆರೋಪಿತರು ನಮ್ಮನ್ನು ನೋಡಿ ಚೀಲ ಬಿಟ್ಟು ಓಡಿ ಹೋಗಿದ್ದು ಅಂತ ದೂರಿನಲ್ಲಿ ಮತ್ತು ಮಹಜರನಲ್ಲಿ ನಮೂದು ಮಾಡಿದ್ದೀರಾ ಅಂದರೆ ಓಡಿ ಹೋಗಲು ಪ್ರಯತ್ನಿಸಿರುವುದಾಗಿ ಬರೆದಿದ್ದೇನೆ. ಆರೋಪಿತರು ಚೀಲ ಬಿಟ್ಟು ಹೋಗಿದ್ದ ಬಗ್ಗೆ ದೂರಿನಲ್ಲಿ ನಮೂದು ಮಾಡಿದ್ದೀರಾ ಅಂದರೆ ಮಾಡಿದ್ದೇನೆ. ಚೀಲ ಬಿಟ್ಟ ಬಗ್ಗೆ ಈಗ ನನಗೆ ತೋರಿಸಿದ ನಿಪಿ-27 ರಲ್ಲಿ ಇಲ್ಲ. ಸಾಕ್ಷಿದಾರರು ಹೇಳುತ್ತಾರೆ ಅದರ ಅವಶ್ಯಕತೆ ಇರುವುದಿಲ್ಲ. ಆರೋಪಿತರು ನಮ್ಮನ್ನು ನೋಡಿ ಚೀಲ ಬಿಟ್ಟು ಓಡಿ ಹೋಗಿದ್ದು ಅಂತ ಈಗ ನನಗೆ ತೋರಿಸಿದ ನಿಪಿ-12 ರಲ್ಲಿ ನಮೂದು ಇಲ್ಲ, ಚೀಲ ಬಿಟ್ಟು ಓಡಿ ಹೋಗಲು ಪ್ರಯತ್ನಿಸಿದ ಬಗ್ಗೆ ನಮೂದು ಇದೆ.

ಈ ಹಂತದಲ್ಲಿ ಮಧ್ಯಾಹ್ನ 2.00 ಗಂಟೆ ಆಗಿರುವುದರಿಂದ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.

ದಿ: 11-08-2025 ರಂದು ಮಧ್ಯಾಹ್ನ 3.45 ಗಂಟೆಗೆ ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್.ಹೆಚ್.ಎಸ್.(ಎಲ್.ಎ.ಡಿ.ಸಿ.), ವಕೀಲರಿಂದ ಆರೋಪಿತರ ಪರವಾಗಿ**:

7. ಈಗ ನನಗೆ ತೋರಿಸಿದ ನಿಪಿ-22 ರ ದೂರಿಗೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ಆ ದೂರನ್ನು ನಾನು ಠಾಣೆಯಲ್ಲಿ ತಯಾರಿಸಿದೆನು. ನಿಪಿ-22 ರಲ್ಲಿ ಆರೋಪಿತರು ಚೀಲ ಬಿಟ್ಟು ಓಡಿ ಹೋಗಲು ಪ್ರಯತ್ನಿಸಿದರು ಅಂತ ನಮೂದು ಇಲ್ಲ ಅಂದರೆ ನಿಜ. ಎರಡು ಆರೋಪಿತರಿಗೆ ನೋಟಿಸ್ಸು ಜಾರಿ ಮಾಡದೇ ಅವರ ಅಂಗ ಶೋಧನೆ ಮಾಡಲು ಮತ್ತು ಅವರ ಕೈಯಲ್ಲಿದ್ದ ಚೀಲವನ್ನು ಪರಿಶೀಲಿಸಲು ಆಗುವುದಿಲ್ಲ ಅಂದರೆ ನಿಜ. ದೂರಿನಲ್ಲಿ ಕೈಯಲ್ಲಿದ್ದ ಚೀಲವನ್ನು ಪರಿಶೀಲಿಸುವ ಪೂರ್ವದಲ್ಲಿ ಅವರ ಒಪ್ಪಿಗೆ ಪಡೆದ ಬಗ್ಗೆ ನಮೂದು ಇಲ್ಲ ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ಕಣ್ತತಪ್ಪಿನಿಂದ ಬಿಟ್ಟು ಹೋಗಿದೆ.

8. ಸ್ಥಳದಲ್ಲಿ ನಾವು ಇತರ ಸಾಕ್ಷಿದಾರರ ಸಾಕ್ಷಿಗಳನ್ನು ಪಡೆಯಲು ಪ್ರಯತ್ನಿಸಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಅಲ್ಲಿ ಬೇರೆ ಯಾರು ಸಾಕ್ಷಿದಾರರು ಇರಲಿಲ್ಲ. ಬೇರೆ ಇತರ ಸಾರ್ವಜನಿಕರು ಯಾರೂ ಇಲ್ಲ ಅಂತ ದೂರಿನಲ್ಲಿ ಮತ್ತು ಮಹಜರನಲ್ಲಿ ನಮೂದು ಮಾಡಿಲ್ಲ. ಆ ಸ್ಥಳದ ಅಕ್ಕಪಕ್ಕ ಎಷ್ಟು ಅಂಗಡಿಗಳು ಇತ್ತು ಅಂದರೆ ಅಂಗಡಿ ಇರಲಿಲ್ಲ. ಆ ಸ್ಥಳದಿಂದ ಎಷ್ಟು ದೂರದಲ್ಲಿ ಅಂಗಡಿ ಇವೆ ಅಂತ ನೆನಪಿಲ್ಲ. ಕೃತ್ಯ ನಡೆದ ಸ್ಥಳದಿಂದ ಪಶ್ಚಿಮದ ಕಡೆ ಗಣೇಶ ಗುಡಿ ಇದೆ ಅಂದರೆ ನಿಜ. ಗಣೇಶ ಗುಡಿಗೆ ಹೊಂದಿಕೊಂಡು ಜೈನ್ ದೇವಸ್ಥಾನ ಇದೆ ಅಂದರೆ ಸ್ವಲ್ಪ ದೂರದಲ್ಲಿರುತ್ತದೆ. ಅದೇ ರಸ್ತೆಯಲ್ಲಿ ಸ್ವಲ್ಪ ದೂರದಲ್ಲಿ ಸಾಯಿಬಾಬಾ ದೇವಸ್ಥಾನ ಇದೆ ಅಂದರೆ  ನಿಜ. ಆದ್ದರಿಂದ ಅಲ್ಲಿ ಯಾವಾಗಲೂ ಜನ

ಸಂಚಾರ ಇದ್ದೇ ಇರುತ್ತದೆ ಅಂದರೆ ಸರಿಯಲ್ಲ. ಜನ ಸಂಚಾರ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಗಣೇಶ ದೇವಸ್ಥಾನದ ಬಳಿ ಸಾರ್ವಜನಿಕರು ಇರುತ್ತಾರೆ ಅಂದರೆ ಅಲ್ಲಿ ಯಾರೂ ಇರಲಿಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರಿಗೆ ನಾನು, ಪ್ರತಾಂಕಿತ ಅಧಿಕಾರ ಅಥವಾ ನ್ಯಾಯಾಧೀಶರು ಅಂಗ ಶೋಧನೆ ಮಾಡಬಹುದಾ ಅಂತ ಕೇಳಿದ್ದೇನೆ.

ನಿಪಿ-7 ಮತ್ತು 8 ಕನ್ನಡದಲ್ಲಿಯೇ ಇದೆ ಅಂದರೆ ನಿಜ. ಆರೋಪಿತರಿಗೆ ಕನ್ನಡ ಓದಲು ಬರೆಯಲು ಬರುತ್ತದೆ ಅಂತ ನಾನು ಖಚಿತಪಡಿಸಿಕೊಂಡಿದ್ದೆ. ಸಾಕ್ಷಿದಾರರು ಹೇಳುತ್ತಾರೆ 1 ನೇ ಆರೋಪಿಗೆ ಕನ್ನಡ ಬರುವುದಿಲ್ಲ. ನಿಪಿ-10 ರಲ್ಲಿ 2 ನೇ ಆರೋಪಿಗೆ ಕನ್ನಡ ಓದಲು ಬರೆಯಲು ಬರುತ್ತದೆ ಅಂತ ಅದರಲ್ಲಿ ನಮೂದು ಆಗಿಲ್ಲ ಅಂದರೆ ನಿಜ. ಈ ಪ್ರಕರಣಕ್ಕೋಸ್ಕರ ಈ ದಾಖಲೆಗಳನ್ನು ಸೃಷ್ಟಿಸಿದ್ದು ಅಂದರೆ ಸರಿಯಲ್ಲ.

9. ನಿಪಿ-12 ರ ಪಂಚನಾಮೆಯನ್ನು ಸ್ಥಳದಲ್ಲಿ ಲ್ಯಾಪಟಾಪ್ ನಲ್ಲಿ ಟೈಪ್ ಮಾಡಿಸಿದ್ದು ಇರುತ್ತದೆ. ಆ ಟೈಪಿಂಗ್ ವರ್ಕ್ ಅರ್ಧ ಗಂಟೆ ಆಗಿರುತ್ತದೆ. ಅದನ್ನು ಜೀಪಿನಲ್ಲಿ ಟೈಪ್ ಮಾಡಿಸಿದೆ. ನಮ್ಮ ಸಿಬ್ಬಂದಿ ನಾಗರಾಜರವರು ಅದನ್ನು ಟೈಪ್ ಮಾಡಿದರು. ಮಹಜರನ್ನು ಟೈಪ್ ಮಾಡಿದ ನಂತರ ಅದರ ಪ್ರಿಂಟ್ ಔಟ್ ತೆಗೆದುಕೊಂಡು ಎಲ್ಲರು ಸಹಿ ಮಾಡಿದ ನಂತರ ನನ್ನೊಂದಿಗೆ ಇತ್ತು. ನಿಪಿ-13 ಮತ್ತು 14 ರ ಪೋಟೋಗಳಲ್ಲಿ ಡಿವೈ.ಎಸ್.ಪಿ. ರವರು ಇರುತ್ತಾರೆ. ಅದರಲ್ಲಿ ನಾನು ಕೊನೆಯಲ್ಲಿ ನಿಂತಿರುವುದು ಕಂಡು ಬರುತ್ತದೆ. ನಿಪಿ-13 ಮತ್ತು 14 ರಲ್ಲಿ ಚಾಸಾ-4 ರವರು ನಾಗರಾಜ ಎಂಬುವವರ ಕಡೆಯಿಂದ ರೈಟಿಂಗ್ ವರ್ಕ್ ಮಾಡಿಸುತ್ತಿದ್ದಾರೆ ಅಂದರೆ ಸುಳ್ಳು. ಸಾಕ್ಷಿದಾರರು ಹೇಳುತ್ತಾರೆ ಅದರಲ್ಲಿ ಆರೋಪಿತರ ಸಹಿಯನ್ನು ಪಡೆದುಕೊಳ್ಳುವುದು ಕಂಡು ಬರುತ್ತದೆ. ಮಹಜರನಲ್ಲ ತೂಕದ ಯಂತ್ರ ಸುಸ್ಥಿತಿಯಲ್ಲಿರುವ ಬಗ್ಗೆ ನಮೂದು ಮಾಡಿದ್ದೀರಾ ಅಂದರೆ ಅದರಿಂದಲೇ ನಾವು ತೂಕ ಮಾಡಿದ್ದು. ಆರೋಪಿತರ ಬಳಿ ಇದ್ದ ಚೀಲವನ್ನು ಸಹಿತ ಅಮಾನತ್ತುಪಡಿಸಿಕೊಳ್ಳಲಾಗಿತ್ತು. ಮು.ಮಾ.7 ರ ಮೇಲೆ ಯಾವುದೇ ಸಹಿ ಇಲ್ಲ ಮತ್ತು ಪಂಚರ ಸಹಿ ಸಹ ಇಲ್ಲ ಅಂದರೆ ನಿಜ. ಪೊಲೀಸ್ ಠಾಣೆಗೆ ಬಂದಾಗ

ವಶಪಡಿಸಿಕೊಂಡಿರುವಂತಹ ಮುದ್ದೆ ಮಾಲು ನಮ್ಮ ಪೊಲೀಸ್ ಸಿಬ್ಬಂದಿಯಾದ ಲೋಹಿತ್ ರವರ ಬಳಿ ಇತ್ತು. ಆ ಮುದ್ದೆ ಮಾಲಿನ ಮೇಲೆ ಹಾಕಿರುವಂತಹ ಸೀಲ್ ನ ಮೊಹರಿನ ಆಕಾರ ಹೇಳಲು ಬರುವುದಿಲ್ಲ.

10. ನಿಪಿ-16 ರಿಂದ 19ರ ಪೋಟೋಗಳಲ್ಲಿ ತೂಕದ ಯಂತ್ರದಲ್ಲಿ ಎಷ್ಟು ತೂಕ ಅಂತ ಇದೆ ಅಂತ ಕಾಣುತ್ತಾ ಇಲ್ಲ ಅಂದರೆ ನಿಪಿ-16ರಲ್ಲಿ ತೂಕ ಕಾಣುತ್ತದೆ. ತೂಕ ಮಾಡುವ ಕಾಲಕ್ಕೆ ನಾವು ಗಾಂಜಾದ ಹೂವು ಮತ್ತು ಬೀಜವನ್ನು ಬೇರ್ಪಡಿಸಿದ್ದೀರಾ ಅಂದರೆ ಬೇರ್ಪಡಿಸಿರುವುದಿಲ್ಲ. ಅಮಾನತ್ತು ಪಂಚನಾಮೆಯನ್ನು ನಾನು ಠಾಣೆಯಲ್ಲಿ ತಯಾರು ಮಾಡಿದ್ದೇನೆ ಅಂದರೆ ಸರಿಯಲ್ಲ. ನಾನು ಠಾಣೆಯಲ್ಲಿ ದಾಖಲೆಗಳನ್ನು ತಯಾರು ಮಾಡಿ ಸಹಿಗಳನ್ನು ಪಡೆದುಕೊಂಡಿದ್ದೇನೆ ಅಂದರೆ ಸರಿಯಲ್ಲ. ನಾನು ಸ್ಥಳದಲ್ಲಿಯೇ ದಾಖಲೆಗಳನ್ನು ತಯಾರು ಮಾಡಿದ್ದರೆ ಸ್ಥಳೀಯರ ಸಹಿ ಪಡೆಯುತ್ತಿದ್ದೆ ಅಂದರೆ ಸ್ಥಳದಲ್ಲಿಯೇ ತಯಾರು ಮಾಡಿದ್ದೇನೆ.

11. ನಾನು ದೂರನ್ನು ಕೊಟ್ಟಾಗ ಸಮಯ ಮಧ್ಯಾಹ್ನ 2.15 ಗಂಟೆ ಆಗಿತ್ತು. ನಾನು ದೂರು ಕೊಟ್ಟಾಗ ಚಾಸಾ-13ರವರು ಎಸ್.ಹೆಚ್.ಓ. ಆಗಿದ್ದರು. ಅದರ ಬಗ್ಗೆ ಸ್ಟೇಷನ್ ಡೈರಿಯಲ್ಲಿ ನಮೂದು ಮಾಡಿದ್ದೇನೆ. ನಿಪಿ-25 ಮತ್ತು 26 ನ್ನು ನಾನೇ ಪಡೆದುಕೊಂಡಿದ್ದೇನೆ. ಕೃತ್ಯ ನಡೆದ ಸ್ಥಳಕ್ಕೆ ನಾವು ಹೋದಾಗ ಸಮಯ ಬೆಳಿಗ್ಗೆ 11.30 ಗಂಟೆ ಆಗಿತ್ತು. ಪಂಚನಾಮೆ ಕಾಲಕ್ಕೆ ನಿಪಿ-21ರ ಪೋಟೋ ತೆಗೆಸಿದ್ದೇವೆ. ಆ ದಿನ 2 ನೇ ಆರೋಪಿಯು ಸ್ಥಳದಲ್ಲಿ ಇರಲಿಲ್ಲ ಅದಕ್ಕೂ 4 ದಿನ ಪೂರ್ವದಲ್ಲಿ 2 ನೇ ಆರೋಪಿಯು ಕೊಟ್ಟೂರುನಲ್ಲಿ ಇದ್ದರು ಅಂದರೆ ಸರಿಯಲ್ಲ. ಆ ದಿನ 2 ನೇ ಆರೋಪಿಗೆ ರಾಯಚೂರಿನಲ್ಲಿದ್ದ ಉಮೇಶರವರು ರಾಯಚೂರಿಗೆ ಕರೆಸಿದ್ದರು ಅಂದರೆ ಸರಿಯಲ್ಲ. ಉಮೇಶರವರ ಮುಖಾಂತರ ಈ 2 ನೇ ಆರೋಪಿಯನ್ನು ಈ ಕೇಸಿನಲ್ಲಿ ಸೇರಿಸಿದ್ದೇನೆ ಅಂದರೆ ಸರಿಯಲ್ಲ. 2 ನೇ ಆರೋಪಿಯಿಂದ ಯಾವುದೇ ಗಾಂಜಾವನ್ನು ವಶಪಡಿಸಿಕೊಂಡಿಲ್ಲ, ಈ ಕೇಸಿಗೂ 2 ನೇ ಆರೋಪಿಗೂ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ರಾಯಚೂರಿನಲ್ಲಿದ್ದ ಉಮೇಶರವರ ಹೇಳಿಕೆಯ ಮೇರೆಗೆ 2 ನೇ ಆರೋಪಿಯನ್ನು ಈ ಕೇಸಿನಲ್ಲಿ ಸೇರಿಸಿದ್ದೇನೆ ಅಂದರೆ ಸರಿಯಲ್ಲ. 2 ನೇ ಆರೋಪಿಯ ಮೇಲೆ ಸುಳ್ಳು

ದೂರು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿದಾರರು ಸ್ವತಃ ಹೇಳುತ್ತಾರೆ 1 ನೇ ಆರೋಪಿಗೆ ನೋಟಿಸ್ಸಿನ ಬಗ್ಗೆ ಹಿಂದಿ ಭಾಷೆಯಲ್ಲಿ ಭಾಷಾಂತರ ಮಾಡಲಾಗಿತ್ತು.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.